ಇ) ಪರಿಶಿಷ್ಟ ಜಾತಿ/ಪರಿಶಿಷ್ಟ ವರ್ಗಕ್ಕೆ ಮೀಸಲಾಗಿಟ್ಟಿರುವ ಶೇಕಡಾವಾರು ಸಂಖ್ಯೆಯನ್ನು ಪಾಲಿಸಲಾಗಿದೆಯೇ ?

ಶ್ರೀ ಎಸ್.ಆರ್. ಬೊಮ್ಮಾಯಿ (ಮಾನ್ಯ ಮುಖ್ಯಮಂತ್ರಿಗಳು).—

ಅ) ರಾಜ್ಯದಲ್ಲಿರುವ ಒಟ್ಟು ಐ.ಎ.ಎಸ್. ಅಧಿಕಾರಿಗಳ ಸಂಖ್ಯೆ ೨೩೫, ಅವರ ಪೈಕಿ ೪೨ ಅಧಿಕಾರಿಗಳು ಕೆ.ಎ.ಎಸ್. ನಿಂದ ಬಡ್ತಿ ಪಡೆದಿದ್ದಾರೆ.

ಆ) ಪರಿಶಿಷ್ಟ ಜಾತಿ – ೩

ಪರಿಶಿಷ್ಟ ವರ್ಗ – ಇಲ್ಲ.

ಇ) ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ವರ್ಗಕ್ಕೆ ಐ.ಎ.ಎಸ್. ಶ್ರೇಣಿಗೆ ಬಡ್ತಿ ನೀಡುವಲ್ಲಿ ಮೀಸಲಾತಿ ನಿಯಮವಿರುವುದಿಲ್ಲ.

ಐ.ಎ.ಎಸ್. ಅಧಿಕಾರಿಗಳ ಲಂಚಗುಳಿತನ ಮಂತ್ರಿತರೆ ಆಪಾದನೆಗಳ ವಿರುದ್ಧ ದೂರನ್ನು ನೀಡುವ ಬಗ್ಗೆ

೪೦೪೭. ಶ್ರೀ ಬಿ. ಲಕ್ಕಪ್ಪ (ಚಿಕ್ಕನಾಯಕನ ಹಳ್ಳಿ).—ಮಾನ್ಯ ಮುಖ್ಯ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

ಅ) ಐಎಎಸ್ ಅಧಿಕಾರಿಗಳ ಲಂಚಗುಳಿತನ ಮತ್ತಿತರೆ ಆಪಾದನೆಗಳ ವಿರುದ್ಧ ಸಾರ್ವಜನಿಕರು ಮತ್ತು ಶಾಸಕರುಗಳೂ ಸೇರಿದಂತೆ ಲೋಕಾಯುಕ್ತರ ಮುಂದೆ ದೂರನ್ನು ಕೊಡಬಹುದೇ,

ಆ) ಒಂದು ದೂರು ವಿಚಾರಣೆಯಲ್ಲಿ ಬಾಕಿ ಇರುವಾಗ, ನಿವೃತ್ತಿಯಾದ ಅಧಿಕಾರಿಯು ನಿವೃತ್ತಿ ವೇತನ ಮತ್ತು ಡಿಸಿಆರ್‌ಜಿಗಳನ್ನು ತಡೆಹಿಡಿಯಲು ಅವಕಾಶಗಳಿವೆಯೇ,

ಇ) ಇಲ್ಲವಾದರೆ ಅಧಿಕಾರಿಯು ನಿವೃತ್ತಿಯಾದ ತಕ್ಷಣ ಲೋಕಾಯುಕ್ತರು ವಿಚಾರಣೆಯನ್ನು ಮುಕ್ತಾಯಗೊಳಿಸಬಹುದೇ,

ಈ) ರಾಜ್ಯದ ಐಎಎಸ್ ಅಧಿಕಾರಿಗಳ ವಿರುದ್ಧ ಲೋಕಾಯುಕ್ತದಲ್ಲಿ ಬಾಕಿ ಇರುವ ದೂರುಗಳ ಸಂಖ್ಯೆ ಎಷ್ಟು ಮತ್ತು ಈ ದೂರುಗಳು ಎಂದಿನಿಂದ ಬಾಕಿ ಇವೆ ?

(ಈ ಪ್ರಶ್ನೆಗಳಿಗೆ ಮಾನ್ಯ ಮುಖ್ಯ ಮಂತ್ರಿಯವರು ಉತ್ತರಿಸುತ್ತಾರೆ)

ಶ್ರೀ ಎಸ್. ಆರ್. ಬೊಮ್ಮಾಯಿ (ಮುಖ್ಯಮಂತ್ರಿಗಳು).—

ಅ) ಹೌದು.

ಆ) ಹೌದು.

ಇ) 'ಅ' ಪ್ರಶ್ನೆಗೆ ಕೊಟ್ಟಿರುವ ಉತ್ತರದಿಂದ ಈ ಪ್ರಶ್ನೆ ಉದ್ಭವಿಸುವುದಿಲ್ಲ.

ಈ) ದಿನಾಂಕ ೮–೫–೧೯೮೭ ಮತ್ತು ೨೫–೧–೧೯೮೮ರಿಂದ ಕ್ರಮವಾಗಿ ಎರಡು ಪ್ರಕರಣಗಳು

ಅಲ್ಪಸಂಖ್ಯಾತ ಆಯೋಗದ ರಚನೆ ಬಗ್ಗೆ

೨೯೭೩. ಶ್ರೀ ಎ.ಎಂ. ಹಿಂಡಸಗೇರಿ (ಹುಬ್ಬಳ್ಳಿ).—ಮಾನ್ಯ ಮುಖ್ಯಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

ಅ) ಎರಡನೇ ಅಲ್ಪಸಂಖ್ಯಾತ ಆಯೋಗವನ್ನು ತನಿಖೆ ಆಯೋಗದ ಕಾಯ್ದೆ ರೀತ್ಯಾ ರಚಿಸಲಾಗಿದೆಯೇ ಹಾಗಿದ್ದಲ್ಲಿ ಯಾವ ನಿಯಮದ ಪ್ರಕಾರ,

ಆ) ಆಯೋಗವನ್ನು ರಚಿಸಲಾಗಿದೆಯೆ ಮತ್ತು ಕಾರ್ಯಾಚರಣೆ ಮಾಡುತ್ತಿದೆಯೇ ?

ಶ್ರೀ ಎಸ್. ಆರ್. ಬೊಮ್ಮಾಯಿ (ಮುಖ್ಯಮಂತ್ರಿಯವರು).—

ಅ) ರಾಜ್ಯ ಅಲ್ಪಸಂಖ್ಯಾತ ಆಯೋಗವನ್ನು ತನಿಖಾ ಆಯೋಗದ ಕಾಯ್ದೆಯಡಿತ್ಯ ರಚಿಸಿಲ್ಲ. ಆದರೆ ಕೇಂದ್ರ ಸರ್ಕಾರದ ಅಲ್ಪಸಂಖ್ಯಾತ ಆಯೋಗವು ಮಾಡಿದ್ದ ಶಿಫಾರಸುಗಳನ್ನು ಪರಿಗಣಿಸಿ ಈ ಆಯೋಗವನ್ನು ರಚಿಸಲಾಗಿದೆ.

ಆ) ಸರ್ಕಾರದ ಆದೇಶ ಸಂಖ್ಯೆ ಡಿ.ಪಿ.ಎ.ಆರ್.೩೫, ಎಲ್‌ಎಂ.ಆರ್.೮೭ ದಿನಾಂಕ ೬-೭-೧೯೮೮ರಂದು ರಚಿಸಲಾಗಿದ್ದು ಅದು ದಿನಾಂಕ ೭-೯-೧೯೮೮ರಿಂದ ಕಾರ್ಯಾಚರಣೆ ಮಾಡುತ್ತಿದೆ.

ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರದಲ್ಲಿ ಸೈಟುಗಳ ವಿತರಣೆ ಬಗ್ಗೆ

೫೦೭೬. ಶ್ರೀ ಎ. ಕೃಷ್ಣಪ್ಪ.—ಮಾನ್ಯ ವಸತಿ ಮತ್ತು ನಗರಾಭಿವೃದ್ಧಿ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ?

ಅ) ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರದಿಂದ ಕಳೆದ ಮೂರು ವರ್ಷಗಳಲ್ಲಿ ಡಿಸ್ಕ್ರಿಷನರಿ ಕೋಟದಲ್ಲಿ ವಿತರಣೆಯಾದ ನಿವೇಶನಗಳು ಎಷ್ಟು ?

ಆ) ಸದರಿ ಕೋಟದಲ್ಲಿ ನಿವೇಶನ ಪಡೆದವರ ಹೆಸರು ಹುದ್ದೆ ಹಾಗೂ ಜಾತಿವಾರು ವಿವರಗಳ ಮಾಹಿತಿ ಒದಗಿಸುವುದು ?

ಶ್ರೀ ಆರ್. ವಿ. ದೇಶಪಾಂಡೆ (ವಸತಿ ಮತ್ತು ನಗರಾಭಿವೃದ್ಧಿ ಸಚಿವರು).—

ಅ) ೨೦೭೬ ನಿವೇಶನಗಳು

ಆ) ಪಟ್ಟಿಯನ್ನು ಲಗತ್ತಿಸಲಾಗಿದೆ. ಅರ್ಜಿಗಳಲ್ಲಿ ಯಾವ ಹುದ್ದೆಯಲ್ಲಿದ್ದರು ಮತ್ತು ಜಾತಿಯ ವಿವರಗಳನ್ನು ಕೇಳಿಲ್ಲವಾದುದರಿಂದ ವಿವರಗಳು ಲಭ್ಯವಿಲ್ಲ.